ನಿಮ್ಮ ಹಿತ್ತಲಲ್ಲಿ ಜೀವನ

ಗಿಡ - ಗಿಡಹೇನು - ಇರುವೆಗಳ ಸಂವಹನಗಳ (ಕೊಡು-ಪಡೆಯುವಿಕೆ) ಅವಲೋಕನೆಗೆ ನೆರವಾಗುವ ಪ್ರಶ್ನಾವಳಿ

1.ಆತಿಥೇಯ ಗಿಡದ ಅಭ್ಯಾಸ (ಹವ್ಯಾಸ) ಏನು?

- ❖ ಗಿಡ
- ❖ ಪೊದೆ
- ❖ ಮರ

2.ಆತಿಥೇಯ ಗಿಡದ ಬೆಳವಣಿಗೆಯ ಹಂತವೇನು?

- ❖ ಸಸ್ಯಕ ಅಭಿವೃದ್ಧಿ
- ❖ ಸಂತಾನೋತ್ಪತ್ತಿ (ಹೂ ಬಿಡುವುದು/ ಹಣ್ಣು ಬಿಡುವುದು)

3.ಗಿಡದ ಯಾವ ಭಾಗವು ಕೀಟಗಳಿಂದ ಪೀಡಿತವಾಗಿದೆ?

- ❖ ಬಲಿತ ಕೊಂಬೆ (ಕಂದು ಬಣ್ಣದ್ದು)
- ❖ ಎಳೆಯ ತುದಿಯ ಕೊಂಬೆ (ಹಸಿರು ಬಣ್ಣದ್ದು)
- ❖ ಹೂವು
- ❖ ಹಣ್ಣು

4.ಕೆಳಕಂಡ ಯಾವ ಪ್ರಭೇದವನ್ನು ಗಿಡದೊಡನೆ ಸಂವಹನದಲ್ಲಿ ಕಾಣುವಿರಿ?

- ❖ ಕೇವಲ ಇರುವೆಗಳು
- ❖ ಕೇವಲ ಗಿಡಹೇನುಗಳು (ಅಥವಾ ಇನ್ನಿತರ ಹೆಮಿಪ್ಟೀರ ಕೀಟಗಳು)
- ❖ ಎರಡೂ

5.ಇರುವೆಯ ಈ ಯಾವ (ರೀತಿಯ) ನಡತೆಯನ್ನು ನೀವು ಗಮನಿಸಿದ್ದೀರಿ?

- ❖ ಆತಿಥೇಯ ಗಿಡದ ಗಿಡಹೇನು ಪೀಡಿತ ಭಾಗಗಳ ಹತ್ತಿರ ಗುಂಪುಗೂಡುವುದು.
- ❖ ಗಿಡದ ಬೇರೆ ಭಾಗಗಳಲ್ಲಿ ತ್ವರಿತ ಚಲನೆ
- ❖ ಎರಡೂ

6.ಗಿಡಹೇನುಗಳು ಹೇಗೆ ಕಾಣುತ್ತವೆ?

- ❖ ಬಿಳಿ ಹತ್ತಿಯಂತೆ
- ❖ ಹಳದಿ ಅಥವಾ ಹಸಿರು ಛಾಯೆ, ಚಿಕ್ಕ, ಪೇರಲ ಹಣ್ಣಿನ ಆಕಾರದ ದೇಹ, ಕೆಲವೊಮ್ಮೆ ಪಾರದರ್ಶಕ
- ❖ ಕಂದು ಅಥವಾ ಕಪ್ಪು, ಕೊಂಬಿನಂತೆ ಇರುವ ತಲೆಯ ಮೇಲಿನ ಅವಯವಗಳು

7.ನೀವು ಇರುವೆಗಳಲ್ಲದೆ ಇನ್ಯಾವುದಾದರೂ ಕೀಟಗಳನ್ನು ಮತ್ತು ರಸ ಹೀರುವ ಕೀಟಗಳನ್ನು ಕಂಡಿರಾ?

- ಹೌದು
- ಇಲ್ಲ

8.ನೀವು ಹಿಂದಿನ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದರೆ, ಎಂತಹ ರೀತಿಯ ಕೀಟಗಳನ್ನು ನೀವು ನೋಡಿದಿರಿ?

- ಕಂಬಳಿ ಹುಳುಗಳು (ಡಿಂಬ)
- ವಯಸ್ಕ

ರುದ್ರಪ್ರಸಾದ್ ಬ್ಯಾನರ್ಜಿ: (ಸಿಎಸ್ಐಆರ್ - ನ್ಯಾಷನಲ್ ಬೊಟಾನಿಕಲ್ ಇನ್ಸಿಟಿಟ್ಯೂಟ್ ಲಕ್ನೋ ನಲ್ಲಿ ಡಾಕ್ಟೋರಲ್ ವಿದ್ಯಾರ್ಥಿ. ಇವರು ಸ್ಥಳ - ಕಾಲದರ್ಶಕ (ಕಾಲಬದ್ಧ) ವ್ಯತ್ಯಾಸಗಳನ್ನು ತ್ರಿ-ಪೋಷಕ ಸಂವಹನಕ್ರಿಯೆ (ಕೊಡು-ಪಡೆ)ಗಳು, ಗಿಡಗಳು, ಗಿಡಹೇನುಗಳು ಮತ್ತು ಇರುವೆಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇವರನ್ನು ಕೆಳಕಂಡಲ್ಲಿ ಸಂಪರ್ಕಿಸಬಹುದು: rudrabanerjee1042@gmail.com

ರೆನೀ ಎಂ. ಬೋರ್ಗೆಸ್: ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಪರಿಸರ ವಿಜ್ಞಾನ ಕೇಂದ್ರದಲ್ಲಿ ಪ್ರಾಧ್ಯಾಪಕರು, ಇವರ ಸಂಶೋಧನಾ ತಂಡವು ಸಹವಿಕಾಸದ ಗತಿವಿಜ್ಞಾನವನ್ನು ಗಿಡಗಳ ಕೀಟಗಳ ಮತ್ತು ಇತರ ಅಕಶೇರುಕಗಳ ಮತ್ತು ಸೂಕ್ಷ್ಮಾಣು ಜೀವಿಗಳ ನಡುವೆ ತಿಳಿಯಲು ಉತ್ಸುಕರಾಗಿದ್ದಾರೆ. ಇವರನ್ನು ಸಂಪರ್ಕಿಸಲು ಇ ಮೇಲ್ ವಿಳಾಸ: renee@iisc.ac.in

ಸರೋಜ್ ಕಾಂತ ಬಾರಿಕ್: ಇವರು ಲಕ್ನೋದಲ್ಲಿರುವ ಸಿಎಸ್ಐಆರ್- ನ್ಯಾಷನಲ್ ಬೊಟಾನಿಕಲ್ ಸಂಶೋಧನಾ ಸಂಸ್ಥೆಯಲ್ಲಿ ನಿರ್ದೇಶಕರು. ಇವರ ಸಂಶೋಧನಾ ಆಸಕ್ತಿಯು ಪರಿಸರ ವಿಜ್ಞಾನ ಮತ್ತು ಪರಿಸರ, ರಕ್ಷಣಾ ಜೀವ ವಿಜ್ಞಾನ ಮತ್ತು ರಾಸಾಯನಿಕ ಪರಿಸರ ವಿಜ್ಞಾನ. ಇವರನ್ನು ಸಂಪರ್ಕಿಸಲು ಇ ಮೇಲ್ ವಿಳಾಸ: sarojkbarik@gmail.com

ಪ್ರೇಮ್ ಪ್ರಕಾಶ್ ಸಿಂಗ್: ಶಿಲ್ಲಾಂಗ್‌ನಲ್ಲಿರುವ (ಈಶಾನ್ಯ) ನಾರ್ತ್ ಈಸ್ಟರ್ನ್ ಹಿಲ್ ವಿಶ್ವವಿದ್ಯಾಲಯದಲ್ಲಿ ಸಸ್ಯ ವಿಜ್ಞಾನದಲ್ಲಿ ಡಾಕ್ಟರೇಟ್ ಮಾಡುತ್ತಿದ್ದಾರೆ. ಇವರ ಸಂಶೋಧನೆಯು ಹವಾಮಾನ ವ್ಯತ್ಯಾಸವು ಸಸ್ಯ ವೈವಿಧ್ಯತೆ ಮತ್ತು ಅಳಿವಿನಂಚಿನಲ್ಲಿರುವ ಗಿಡಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎನ್ನುವ ಬಗ್ಗೆ. ಇವರನ್ನು ಸಂಪರ್ಕಿಸಬಹುದಾದ ವಿಳಾಸ: prem12flyhigh@gmail.com

ಮಧೂಲಿಕ ಅಗ್ರವಾಲ್: ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ (ಬಿಎಚ್‌ಯು) ಪ್ರಾಧ್ಯಾಪಕರಾಗಿರುವ ಇವರು ಮುಖ್ಯ ವಾಣಿಜ್ಯ ಕೃಷಿ ಬೆಳೆಗಳ ಸಸ್ಯಕ್ರಿಯಾ ಹೊಂದಾಣಿಕೆಯನ್ನು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ವ್ಯತ್ಯಾಸದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸುತ್ತಿದ್ದಾರೆ. ಸಂಪರ್ಕಿಸಲು madhoo.agrawal@gmail.com

ಅನುವಾದ : ಡಾ.ಎಸ್. ಸುಧಾ